ಮೀಸಲಿಡೋಣವೆಂದು ಟ್ರಾಫಿಕ್ ವಾರ್ಡನ್ ಆಗಿ ಸೇರಿಕೊಂಡೆ. ನನಗೆ ನಿಯಮಿತವಾಗಿ ಸಂಬಳ ದೊರಕದಿದ್ದರೂ ಹೇರಳವಾದ ಸವಲತ್ತುಗಳಿವೆ. ಎಲ್ಲದಕ್ಕಿಂತ ಹೆಚ್ಚಾಗಿ ಜನಮನ್ನಣೆ ಇದೆ. ಜನಸೇವೆ ಮಾಡಿದ ತೃಪ್ತಿ ಲಭಿಸುತ್ತೆ ಅನ್ನೋದು ಪ್ಲಸ್ ಪಾಯಿಂಟ್' ಎಂದು ತನ್ನೆದುರಿಗೆ ಕುಳಿತು ತನ್ನ ಮಾತುಗಳನ್ನೇ ಗಮನವಿಟ್ಟು ಆಲಿಸುತ್ತಿದ್ದವನನ್ನು ಸೂಕ್ಷ್ಮವಾಗಿ ನಿರುಕಿಸಿದಳು.

ಗುಂಗುರು ಕೂದಲುಳ್ಳ ಅವನೆದುರಿಗೆ ಮುಚ್ಚುಮರೆ ಮಾಡದಂತೆ ಸೂಕ್ಷ್ಮ ಕಣ್ಣುಗಳು ಮೋಡಿ ಮಾಡುತ್ತಿದ್ದವು. ಇಪ್ಪತ್ತೆಂಟರ ವಯೋಮಾನದವನಿರಬೇಕೆಂದು ಮೇಲ್ನೋಟಕ್ಕೆ ಅಂದಾಜು ಮಾಡುತ್ತಾ ಅವನನ್ನು ಮಾತಿಗೆಳೆದಳು.

'ನಿಮ್ಮ ವೃತ್ತಿ ತನಿಖೆ ಮಾಡುವುದಾಗಿದೆಯೇ?'

'ಹಾಂ... ಅದು ಒಂದು ಭಾಗವಷ್ಟೇ. ತನಿಖೆಯ ಬಳಿಕ ಪರಿಶೀಲನೆಗೆ ಸರ್ಕಾರದ ವತಿಯಿಂದ ನೇಮಕಗೊಂಡ ತಜ್ಞರಿದ್ದು, ನಮ್ಮ ವರದಿಯನ್ನು ಪರಿಶೀಲಿಸಿ ಶೀಘ್ರ ವಿಲೇವಾರಿ ಹಾಗೂ ಆದೇಶಕ್ಕೆ ಸ್ಥಾನಿಕ ಮ್ಯಾಜಿಸ್ಟ್ರೇಟರ್‌ಗೆ ಆನ್‌ಲೈನ್‌ನಲ್ಲಿ ರವಾನೆಯಾಗುತ್ತೆ. ನನ್ನ ರೊಬೋ ಕಾಪ್‌ಗಳ ಮೆಮೊರಿಯಲ್ಲಿರುವ ರೆಕಾರ್ಡಿಂಗ್‌ಗಳನ್ನು ಪರಿಶೀಲಿಸಿ ಅಂದೇ ಆದೇಶಗಳು ಹೊರಬರುತ್ತವೆ. ತನಿಖೆಯಲ್ಲದೆ ಈ ನನ್ನ ರೊಬೋ ಕಾಪ್‌ಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದೂ ನನ್ನ ಜವಾಬ್ದಾರಿ ಆಗಿದೆ.'

'ನಿಮಗೆ ಈ ಈರ್ವರು ರೊಬೋ ಕಾಪ್‌ಗಳಷ್ಟೇ ಸಹಾಯಕರೇ.'

'ನನ್ನ ಬಳಿ ಬೇರೆ ಸಂಚಾರಿ ಕೆಲಸ ಕಾರ್ಯ ನಿರ್ವಹಿಸುವ ರೊಬೋಗಳಿವೆ. ಸಂಚಾರದ ದಿನನಿತ್ಯದ ಅಂಕಿ ಅಂಶಗಳ ಶೇಖರಣೆ ಹಾಗೂ ವಿಶ್ಲೇಷಣೆಗಳನ್ನು ಗ್ರಾಫಿಕಲ್ ರೂಪದಲ್ಲಿ ಮೂಡಿಸುವುದು, ರಸ್ತೆಯ ಅಭಿವೃದ್ಧಿ ಯೋಜನೆಗಳ ಸಾಧ್ಯತೆ ಬಾಧ್ಯತೆಗಳ ಚಿತ್ರಣ ನೀಡುವುದು, ಅಪಘಾತಕ್ಕೆ ಪರಿಹಾರಗಳನ್ನು, ತಂತ್ರಜ್ಞಾನವನ್ನು ಮೇಲ್ಮಟ್ಟಕ್ಕೇರಿಸುವುದರ ಮೂಲಕ ನೀಡುವುದು... ಇನ್ನೂ ಹಲವಾರು ಕೆಲಸಗಳಿವೆ.'

'ನಿಮಗೆ ಸಹಾಯಕರಾಗಿ ಅಲ್ಲೂ ರೊಬೋ ಕಾಪ್‌ಗಳಿರುವರೇ?'

'ರೊಬೋ ಕಾಪ್‌ಗಳಿಲ್ಲದೆ ಕೆಲಸ ಸಾಧ್ಯವೇ ಹನ್ನಾ? ಇಡೀ ನಗರದಲ್ಲಿ ಒಂದು ಕಾಲದಲ್ಲಿ ಸಂಚಾರ ವಿಭಾಗದ ದುಸ್ತರ ಕೆಲಸಗಳು, ಚಳಿ–ಗಾಳಿ, ಮಳೆಯೆನ್ನದೆ ಹಗಲಿರುಳೂ ಶ್ರಮಿಸಿ ಕಾಯಿಲೆಗೀಡಾಗುವುದನ್ನು ತೊಲಗಿಸುವ ಕ್ರಮವೇ ಈ ರೊಬೋ ಕಾಪ್‌ಗಳು. ಊಟ, ನೀರು, ಬಟ್ಟೆ ಕೇಳುವುದಿಲ್ಲ. ಮನೆ–ಮಠ ಕೇಳುವುದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಅವರ ನಿರಂತರ ಸೇವೆ ನಮಗೆ ವರದಾನವಾಗಿದೆ. ಇಲ್ಲಿ ನೋಡಿ...' ಎಂದು ತನ್ನ ಕೈಯಲ್ಲಿದ್ದ ಎಂ.ಪಿ. ವಾಕಿಯಲ್ಲಿ ಕಾರಿನ ಹಿಂದಿನ ಸೀಟಿನಲ್ಲಿ ತೆಪ್ಪಗೆ ಕುಳಿತಿದ್ದ ತನ್ನ ಇಬ್ಬರು ಸಹಾಯಕ ರೊಬೋಕಾಪ್‌ಗಳಿದ್ದ ದೃಶ್ಯವನ್ನು ತೋರಿಸುತ್ತಾ ಮುಂದುವರೆಸಿದ – 'ಆಲ್ಫಾ ಹಾಗೂ ಬೀಟಾ ಎಂದು ಕರೀತೀನಿ. ಮಾನವ ಸಮಯ ಒಡ್ಡಿದ ಪರಿಸ್ಥಿತಿಗಳಲ್ಲಿ ಪರೀಕ್ಷೆಗಳನ್ನು ಗೆಲ್ಲುವುದು ದುಸ್ಸಾಹಸವಾದಾಗ ಅವರ ಸ್ಥಾನಕ್ಕೆ ಬಂದ ಆಪದ್ಬಾಂಧವರು! ಮ್ಯಾನ್ ಹ್ಯಾಸ್ ಫೇಲ್ಡ್ ದಿ ಟೆಸ್ಟ್ ಆಫ್ ಟೈಮ್. ಇದಕ್ಕೆ ಸಾಕ್ಷಿಯೇ ಅರೆ ಮಾನವರು' ಎಂದು ದೀರ್ಘ ಶ್ವಾಸ ತೆಗೆದು ಯಾವುದೋ ಗುಂಗಿಗೆ ಹೋದಂತೆ ಹೊರಗಿನ ಬೆಳಕಿನ ಚುಕ್ಕಿಗಳೆಡೆ ಕಣ್ಣಾಯಿಸಿದ.

'ಅರೆ ಮಾನವರ ಹೋರಾಟದ ಸುದ್ದಿ ಬಗ್ಗೆ ನಾನು ದಿನನಿತ್ಯ ವೆಬ್‌ನಲ್ಲಿ ನೋಡುತ್ತಿರುವೆ. ನಾನು ಒಮ್ಮೆ ಸೆಂಟ್ರಲ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅರೆ ಮಾನವರ ಪಡೆಯೊಂದು ಅರೆನಗ್ನವಾಗಿ ತಮ್ಮ ದೇಹದಲ್ಲಿ ಅಳವಡಿಸಿದ ಕೃತಕ ವ್ಯವಸ್ಥೆಯನ್ನು ಪ್ರದರ್ಶಿಸುತ್ತಾ ಪ್ರತಿಭಟನೆಯಲ್ಲಿ ನಿರತವಾಗಿತ್ತು. ನಾನು ಕುತೂಹಲದಿಂದ ಅವರನ್ನು ಪ್ರಶ್ನಿಸಿ ವಿಷಯ ತಿಳಿದುಕೊಂಡೆ. ಅವರ ಡಿಜಿಟಲ್ ಪ್ಲಕಾರ್ಡ್‌ಗಳಲ್ಲಿ 'ನಮಗೆ ನ್ಯಾಯ ನೀಡಿ. ನೌಕರಿ ಒದಗಿಸಿ. ಕುಟುಂಬ ನೀಡಿ...' ಇತ್ಯಾದಿ ಘೋಷಣೆಗಳು ಮೂಡಿಬರುತ್ತಿದ್ದವು.'

**ಸಶೇಷ**

---

## ಧಾರಾವಾಹಿಗೆ ಶರಣಾದೆ!

ಯಂಡಮೂರಿ ವೀರೇಂದ್ರನಾಥ್ ಅವರ 'ದಿಂಬಿನಡಿಯಲ್ಲೊಂದು ವಿಷ ಸರ್ಪ' ಎಂಬ ರೋಚಕವಾದ ಧಾರಾವಾಹಿಗೆ ನಾನು ಶರಣಾದೆ. ಇದೇ ಮೊದಲು ಒಂದು ಧಾರಾವಾಹಿಗಾಗಿ ವಾರವಿಡೀ 'ಸುಧಾ' ವಾರಪತ್ರಿಕೆಯನ್ನು ಕಾದಿದ್ದು. ಅದ್ಭುತವಾದ, ಶಬ್ದ, ಶಬ್ದಕ್ಕೂ ರೋಚಕತೆಯನ್ನು ಹಿಡಿದುಕೊಂಡು ಉಗ್ರನಿಂದ ಆರಂಭವಾಗಿ ದೇಶಪ್ರೇಮದಿಂದ ಕೊನೆಗೊಂಡ ಒಂದು ಕುತೂಹಲಭರಿತ ಕಾದಂಬರಿ.

ಆ ಹೆಣ್ಣು ಮಗಳ ಸಾಹಸ, ಉಗ್ರರ ಕರುಣೆಯಿಲ್ಲದ ಅಟ್ಟಹಾಸ, ಮುಸ್ಲಿಂನಾದರೂ ಆತನಿಗಿರುವ ದೇಶಪ್ರೇಮ ವಾವ್. ಯಾವುದೇ ಸಿನಿಮಾ ನೋಡಿದರೂ ಇದರಷ್ಟು ಅನುಭವ ಸಿಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ನಾವೇ ಕಾಶ್ಮೀರಕ್ಕೆ ಹೋಗಿ ಬಂದಂತಾಗಿದ್ದಂತೂ ನಿಜ. ಇದು ಸಮಸ್ತ ಭಾರತೀಯರಿಗೆ ದೇಶಕ್ಕಾಗಿ ಹೋರಾಡಲು ಪ್ರೇರಣೆ ನೀಡುವಂತಹ ಧಾರಾವಾಹಿ.

–ಅಶೋಕ್ ಬೇಳೂರ್, ಸಾಗರ

## ಅಂತ್ಯ ಚೆನ್ನಾಗಿದೆ

ಯಂಡಮೂರಿ ಕಾದಂಬರಿ ಓದಲು 'ಸುಧಾ'ಕ್ಕಾಗಿ ತುದಿಗಾಲಲ್ಲಿ ಕಾಯುತ್ತಿದ್ದೆವು. ಆರನೇ ಕಂತಿನಲ್ಲಿ ಕಲ್ಯಾಣಿ ಎಲ್ಲಿ ಪ್ರಭಾಕರನ

ದಿಂಬಿನಡಿಯಲ್ಲೊಂದು ವಿಷ ಸರ್ಪ

**ಯಂಡಮೂರಿ ವೀರೇಂದ್ರನಾಥ್**

ಕನ್ನಡಕ್ಕೆ: ಸಂಡೂರು ವೆಂಕಟೇಶ್

ಬಲೆಗೆ ಬೀಳುತ್ತಾಳೋ ಎಂದು ಬೇಜಾರಾಗಿತ್ತು. ಮುಕ್ತಾಯ ತುಂಬ ಚೆನ್ನಾಗಿದೆ.

–ಲಲಿತ ಕೃಷ್ಣಮೂರ್ತಿ ಮೈಸೂರು, ಕೊಹಿಮ ಬಸರಕೋಡು

## ದೇಶಭಕ್ತಿ ಉಕ್ಕಿಸಿತು

ಕಾದಂಬರಿ ರೋಚಕ. ಕಲ್ಯಾಣಿ ಪಾತ್ರ ಅದ್ಭುತವಾಗಿದೆ. ಇಂದಿಗೂ ಮಿಜ್ರಾಡಿನ್‌ನಂತಹ ಅಪಾಯಕಾರಿ ಟೆರರಿಸ್ಟ್‌ಗಳು ದೇಶದ ಉದ್ದ ಅಗಲಕ್ಕೂ ವ್ಯಾಪಿಸಿಕೊಂಡಿದ್ದಾರೆ. ಈ ಕಥಾನಕದ ಮೂಲಕ ದೇಶಭಕ್ತಿಯನ್ನು ಓದುಗರಲ್ಲಿ ಉಕ್ಕಿಸಿದ್ದು ವಿಶೇಷ.

–ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ಉತ್ತಮ ಅನುವಾದ

ಯಂಡಮೂರಿ ಅವರ ಕಾದಂಬರಿಯನ್ನು ಸಂಡೂರು ವೆಂಕಟೇಶ್ ಅವರು ತುಂಬ ಚೆನ್ನಾಗಿ ಅನುವಾದಿಸಿದ್ದಾರೆ. ಮೂಲ ಕಾದಂಬರಿಯನ್ನೇ ಓದಿದ ಹಾಗೆ ಅನಿಸಿ ಸರಾಗವಾಗಿ ಓದಿಸಿಕೊಂಡು ಹೋಯಿತು.

–ಅರುಂಧತಿ ರುದ್ರಮೂರ್ತಿ ಬೆಂಗಳೂರು

## ಬೇಗ ಮುಗಿದದ್ದು ಶಾಕ್

ಯಂಡಮೂರಿಯವರ ಹಲವಾರು ಕಾದಂಬರಿಗಳನ್ನು ಓದಿದ್ದ ನನಗೆ ಅನೇಕ ಅಚ್ಚರಿ, ಕೌತುಕಗಳ, ತಿರುವುಗಳನ್ನು ನಿರೀಕ್ಷಿಸಿ ಧಾರಾವಾಹಿ ಓದಲು ಪ್ರಾರಂಭಿಸಿದೆ. ಏಳನೇ ಕಂತಿನಲ್ಲೇ 'ಮುಗಿಯಿತು' ಎಂಬ ನುಡಿ ನೋಡಿ ಶಾಕ್ ಆಯಿತು.

–ಪುಷ್ಪಾ ಶ್ರೀರಾಮ್, ಬೆಂಗಳೂರು

## ತೀರಾ ಸಪ್ಪೆ ಅನಿಸಿತು

ಧಾರಾವಾಹಿ ಅಲ್ಲಲ್ಲಿ ಯಂಡಮೂರಿಯವರ ಲೇಖನಿಯ ಪ್ರಖರತೆಯನ್ನು ಪ್ರದರ್ಶಿಸಿದರೂ 'ಬೆಳದಿಂಗಳ ಬಾಲೆ'ಯಂತಹ ಕಾದಂಬರಿಗಳಿಗೆ ಹೋಲಿಸಿದರೆ ತೀರಾ ಸಪ್ಪೆ ಎನಿಸಿತು. ಮುಂದಿನ ಕಂತುಗಳು ಚೆನ್ನಾಗಿರಬಹುದು ಅಂತ ಅಂದುಕೊಳ್ಳುತ್ತಿರುವಾಗಲೇ ಧಾರಾವಾಹಿ ಮುಗಿದೇಹೋಯಿತು. ತುಂಬಾ ನಿರಾಸೆಯಾಯಿತು.

–ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು